# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/181/15-16

ದಿನಾಂಕ : 26-08-2016

ಉಪಸ್ಥಿತರು: ಶ್ರೀ ಲೋಕೇಶ್ ಪಿ.ಎನ್ (ಕ.ಆ.ಸೇ)

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀ ಎ ಚನ್ನವೀರಪ್ಪ ತಂದೆ ಲೇಟ್ ತಿಮ್ಮಪ್ಪ, ಸಾ॥ಪ್ಲಾಟ್ 118, ವಾರ್ಡ್ ನಂ 22, ತಾಳೂರು ರಸ್ತೆ, ಭಗತ್ ಸಿಂಗ್ ನಗರ, 2ನೇ ಕ್ರಾಸ್, ಬಳ್ಳಾರಿ<br><br>ಶ್ರೀ ಹೆಚ್ ಈರಣ್ಣ ಹಾಗೂ ಶ್ರೀ ಯು ವೀರಭದ್ರಪ್ಪ, ವಕೀಲರು, ಬಳ್ಳಾರಿ | 1. ತಹಶೀಲ್ದಾರರು, ಬಳ್ಳಾರಿ<br>2. ಕಂದಾಯ ನಿರೀಕ್ಷಕರು, ಬಳ್ಳಾರಿ<br>3. ಗ್ರಾಮ ಲೆಕ್ಕಾಧಿಕಾರಿಗಳು, ಕೊಳಗಲ್ಲು |

ದಾವಾ ಜಮೀನಿನ ವಿವರ :-

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಕೊಳಗಲ್ಲು | 697 (ಪೈಕಿ) | 0.14 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು, ಕೊಳ್ಳಗಲ್ಲು ಇವರ ಎಂ.ಆರ್ ನಂ 1102/1997-98 ದಿನಾಂಕ: 10-06-1998 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 26-08-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಅವರ ವಕೀಲರು ಮುಖಾಂತರ ದಿನಾಂಕ: 26-08-2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ಕೊಳಗಲ್ಲು ಗ್ರಾಮದ ಸ.ನಂ 697 (ಪೈ) ವಿಸ್ತೀರ್ಣ: 0.14 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಬಳ್ಳಾರಿ ಇವರ ಎಂ.ಆರ್ ನಂ 1102/1997-98 ದಿನಾಂಕ: 10.06.1998 ನ್ನು ರದ್ದು ಪಡಿಸುವಂತೆ ಕೋರಿರುತ್ತಾರೆ. ಹಾಗೂ ಸದರಿ ಜಮೀನನ್ನು ಅಪೀಲುದಾರರು, ನೊಂದಾಯಿತ ಕ್ರಯ ಪತ್ರ ಸಂಖ್ಯೆ 211/98-99 ದಿನಾಂಕ 15-04-1998 ರಲ್ಲಿ ಬಿ.ಶ್ರೀನಿವಾಸಲು ತಂದೆ ಲೇಟ್ ಗೋವಿಂದಪ್ಪ ವರಿಂದ ಖರೀದಿಸಿದ್ದು, ಸದರಿ ಕ್ರಯ ಪತ್ರದನ್ವಯ ಪಹಣಿಯಲ್ಲಿ ಹಕ್ಕು ದಾಖಲಿಸುವಂತೆ ಕೋರಿರುತ್ತಾರೆ.

ಮುಂದುವರೆದು ಪ್ರಕರಣದಲ್ಲಿನ ಲಭ್ಯ ದಾಖಲೆಗಳನ್ನು ಪರಿಶೀಲಿಸಲಾಗಿ , ಸದರಿ ಹಕ್ಕುಬದಲಾವಣೆಯನ್ನು ಕಂದಾಯ ನಿರೀಕ್ಷಕರು ಬಳ್ಳಾರಿ ಇವರು ಸಕಾರಣವಾಗಿಯೆ ತಿರಸ್ಕರಿಸಿರುತ್ತಾರೆ. ಕೊಳಗಲ್ಲು ಗ್ರಾಮದ ಸ.ನಂ 697 (ಪೈ) ವಿಸ್ತೀರ್ಣ: 0.14 ಎಕರೆ ಜಮೀನು ವ್ಯವಸಾಯ ಜಮೀನಾಗಿದ್ದು, ವ್ಯವಸಾಯೇತರ ಜಮೀನಾಗಿ ಪರಿವರ್ತಿಸದೇ ನಿವೇಶನಗಳನ್ನಾಗಿ ಮಾಡಿ ಮಾರಾಟ ಮಾಡಿರುವುದು ಕರ್ನಾಟಕ ಭೂ-ಕಂದಾಯ ಕಾಯ್ದೆ ಕಲಂ 95 ರ ಉಲ್ಲಂಘನೆ ಕಂಡು ಬಂದಿರುತ್ತದೆ ಕಾರಣ ಕೆಳಕಂಡ ಆದೇಶ.